## ಕರ್ನಾಟಕ ವಿಧಾನ ಪರಿಷತ್ತು

ಶ್ರೀ ಅರುಣ ಶಹಾಪುರ, ಮಾನ್ಯ ಸದಸ್ಯರು, ಕರ್ನಾಟಕ ವಿಧಾನ ಪರಿಷತ್ತು ರವರು, ವಿಜಯಪುರದಲ್ಲಿ 2019ರಲ್ಲಿ ಸ್ಥಾಪಿತವಾದ ಅಪರ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಈ ಕಚೇರಿಗೆ ಅಗತ್ಯವಾದ ಸಿಬ್ಬಂದಿಗಳನ್ನು ಸೃಜಿಸುವಂತೆ ಈಗಾಗಲೇ ಪ್ರಸ್ತಾವನೆಗಳು ಸಲ್ಲಿಕೆಯಾಗಿದ್ದರೂ ಸಹ ಇಲ್ಲಿಯವರೆಗೂ ಸಿಬ್ಬಂದಿಗಳ ನಿಯೋಜನೆಯಾಗದೇ ಕಚೇರಿಯಲ್ಲಿ ಕೆಲಸಗಳು ನಿಧಾನ ಗತಿಯಲ್ಲಿ ಸಾಗುತ್ತಿದ್ದು ಹಾಗೂ ಈ ಕಛೇರಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಸ್ಥಳವನ್ನು ಗುರುತಿಸಿರುವ ಪ್ರಸ್ತಾವನೆಯು ಸಹ ಇತ್ಯರ್ಥವಾಗದೆ ಇರುವ ಕುರಿತು ಕೂಡಲೇ ಈ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ 72ರ ನಿಯಮದಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಹೇಳಿಕೆ.

*****

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಪರ ನಿರ್ದೇಶಕರ ಕಛೇರಿ, ವಿಜಯಪುರ ಇದನ್ನು ದಿನಾಂಕ:09.12.2019ರಂದು ಸ್ಥಾಪಿಸಲಾಗಿದೆ.

- ಅಪರ ನಿರ್ದೇಶಕರ ಹುದ್ದೆಯು ಪದೋನ್ನತಿ ಹುದ್ದೆಯಾಗಿದ್ದು, ಪದೋನ್ನತಿ ಪ್ರಸ್ತಾವನೆಯು ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆ. ಪ್ರಸ್ತುತ ವಿಭಾಗೀಯ ಸಹ ನಿರ್ದೇಶಕರು, ಬೆಳಗಾವಿ ಇವರು ಹೆಚ್ಚುವರಿ ಪ್ರಭಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಖಾಯಂ ಉಪ ನಿರ್ದೇಶಕರು ಈಗಾಗಲೇ ಕಾರ್ಯ ನಿರ್ವಹಿಸುತ್ತಿರುತ್ತಾರೆ.
- ಉಳಿದ ಸಿಬ್ಬಂದಿಗಳ ವಿವರಗಳು ಈ ಕೆಳಕಂಡಂತಿದೆ.

| ಕ್ರ ಸಂ | ಮಂಜೂರಾದ ಹುದ್ದೆ | ಮಂಜೂರಾದ ಹುದ್ದೆ ಸಂಖ್ಯೆ | ಕಾರ್ಯ ನಿರತ ಹುದೆ ಸಂಖ್ಯೆ | ಖಾಲಿ ಇರುವ ಹುದ್ದೆ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವಅಧಿಕಾರಿ / ಸಿಬ್ಬಂದಿಗಳ ವಿವರ |
|---|---|---|---|---|---|
| 1 | ಅಪರ ನಿರ್ದೇಶಕರು | 1 | 0 | 1 | ಹುದ್ದೆ ಖಾಲಿ ಇದ್ದು, ವಿಭಾಗೀಯ ಸಹ ನಿರ್ದೇಶಕರು, ಬೆಳಗಾವಿ ಇವರು ಹೆಚ್ಚುವರಿ ಪ್ರಭಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. |
| 2 | ಉಪ ನಿರ್ದೇಶಕರು | 1 | 1 | 0 | ಡಾ: ಲಕ್ಷ್ಮೀಬಾಯಿ (ರೆಗ್ಯೂಲರ್ಅಧಿಕಾರಿ) |
| 3 | ಸಹಾಯಕ ಆಡಳಿತಾಧಿಕಾರಿಗಳು | 1 | 1 | 0 | ಶ್ರೀಮತಿ ವಿಜಯಲಕ್ಷ್ಮೀ ಸಿದ್ಮಲ್ ಇವರು ರೆಗ್ಯೂಲರ್ ಆಗಿ ಹಾಗೂ ಹೆಚ್ಚುವರಿಯಾಗಿ ಶ್ರೀ ಹೇಮಂತ ಕೆ. ಕುಲಕರ್ಣಿ ಇವರು ವಾರದ ನಾಲ್ಕು ದಿನ ಕಾರ್ಯ ಹೊಂದಾಣಿಕೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. |

| | | | | | |
|---|---|---|---|---|---|
| 4 | ಆರೋಗ್ಯ ಮೇಲ್ವಿಚಾರಕರು | 1 | 0 | 1 | ಹುದ್ದೆ ಖಾಲಿ ಇದ್ದು, ಶ್ರೀ ಬಿ.ಎಸ್.ಪಾಟೀಲ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. |
| 5 | ಕಛೇರಿ ಅಧೀಕ್ಷಕರು | 1 | 1 | 0 | ಶ್ರೀ. ಜೆ ಜಗನ್ನಾಥ (ರೆಗ್ಯೂಲರ್ ಸಿಬ್ಬಂದಿ) ಹಾಗೂ ಶ್ರೀ ಪ್ರಕಾಶ ಪತ್ತಾರ್ ಹಾಗೂ ಶ್ರೀ ಎ. ಎಸ್ .ಕೋಷ್ಟಿ ಇವರು ತಮ್ಮ ತಮ್ಮ ಮೂಲ ಕಛೇರಿಯ ಕೆಲಸದೊಂದಿಗೆ ಕಾರ್ಯ ಹೊಂದಾಣಿಕೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. |
| 6 | ಪ್ರಥಮ ದರ್ಜೆ ಸಹಾಯಕರು | 2 | 1 | 1 | ಎರಡೂ ಹುದ್ದೆಗಳು ಖಾಲಿ ಇದ್ದು, ಶ್ರೀ ಮೋಹನಕುಮಾರ ಬಣ್ಣದವರ, ಶ್ರೀಮತಿ ಅಮೃತಾ ಆಲೂರ, ಹಾಗೂ ಶ್ರೀ.ಎಂ ಬಿ ಬಳ್ಳಾರಿ 03 ಜನ ಪ್ರ.ದ.ಸ ರವರು ತಮ್ಮ ತಮ್ಮ ಮೂಲ ಕಛೇರಿಯ ಕೆಲಸದೊಂದಿಗೆ ಕಾರ್ಯ ಹೊಂದಾಣಿಕೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. |
| 7 | ದ್ವಿತೀಯ ದರ್ಜೆ ಸಹಾಯಕರು | 2 | 2 | 0 | ಶ್ರೀ ಐ ಎ ಮುಲ್ಲಾ, (ರೆಗ್ಯೂಲರ್ ಸಿಬ್ಬಂದಿ) ಶ್ರೀಮತಿ ಭಾಗ್ಯ ಎಂ. (ರೆಗ್ಯೂಲರ್ ಸಿಬ್ಬಂದಿ) |
| 8 | ಕಂಪ್ಯೂಟರ್ ಆಪರೇಟರ್ (ಹೊರಗುತ್ತಿಗೆ) | 2 | 1 | 1 | ಕಿಯೋನಿಕ್ಸ್ ಮೂಲಕ ಒಬ್ಬ ಕಂಪ್ಯೂಟರ್ ಆಪರೇಟರ್ ಅನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| 9. | ವಾಹನ ಚಾಲಕರು | 2 | 0 | 2 | ಎರಡೂ ಹುದ್ದೆಗಳು ಖಾಲಿ ಇದ್ದು, ಶ್ರೀ. ಎ ಎ ಪಾಟೀಲ, ವಾಹನ ಚಾಲಕ ಇವರು ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. |
| 10. | ಗ್ರೂಪ್"ಡಿ" | 5 | 0 | 5 | ಐದೂ ಹುದ್ದೆಗಳು ಖಾಲಿ ಇದ್ದು, ಜಿಲ್ಲಾ ಆಸ್ಪತ್ರೆ, ವಿಜಯಪುರದಿಂದ ಒಬ್ಬ ಹೊರಗುತ್ತಿಗೆ ಸಿಬ್ಬಂದಿಯ ಸೇವೆಯನ್ನು ಪಡೆಯಲಾಗಿದೆ. |

- ಶ್ರೀ ಎಸ್. ಎಂ.ಪೂಜಾರಿ, ಸೇವಾ ಅಭಿಯಂತರರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿ, ವಿಜಯಪುರ ಇವರನ್ನು ನಿಯೋಜನೆ ಮೇಲೆ ಪಡೆಯಲಾಗಿದೆ.
- ಸರ್ಕಾರಿ ಆದೇಶ ಸಂಖ್ಯೆ: ಆಕುಕ/174/ಎಚ್ಎಸ್ಎಚ್ 2019 ದಿ:24/07/2019 ರಲ್ಲಿ ಮಂಜೂರಾದ ಹುದ್ದೆಗಳೊಂದಿಗೆ ಹೆಚ್ಚುವರಿಯಾಗಿ ಬೇಕಾದಂತಹ ಅಧಿಕಾರಿ/ಸಿಬ್ಬಂದಿಗಳನ್ನು ಬೇರೆ

- ಬೇರೆ ಸ್ವಾಯತ್ತ ಮತ್ತು ಆರೋಗ್ಯ ಸಂಸ್ಥೆಗಳಿಂದ ಬಹಳ ವರ್ಷಗಳಿಂದ ಖಾಲಿ ಇರುವ ಹುದ್ದೆಗಳನ್ನು ಮರು ಸ್ಥಳಾಂತರಿಸಲು ಪ್ರಸ್ತಾವನೆಯು ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆ.
- ಜಿಲ್ಲಾ ಆಸ್ಪತ್ರೆ ಆವರಣದಲ್ಲಿರುವ ಉಪಕರಣ ಕಾರ್ಯಗಾರವನ್ನು ತಕ್ಕಮಟ್ಟಿಗೆ ನವೀಕರಿಸಿಕೊಂಡು ಕಛೇರಿಯನ್ನು ತಾತ್ಕಲಿಕವಾಗಿ ಪ್ರಾರಂಭಿಸಲಾಗಿದೆ.
- ವಿಜಯಪುರ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ಸದರಿ ಕಛೇರಿಗೆ ಸ್ಥಳವನ್ನು ಗುರುತಿಸಿ ಅದಕ್ಕೆ ಅವಶ್ಯವಿರುವ ನೀಲ ನಕ್ಷೆ ತಯಾರಿಸಲು ಮುಖ್ಯ ಅಭಿಯಂತರರು, ಆಕುಕ ಇಲಾಖೆ ಇಂಜಿನೀಯರಿಂಗ್ ವಿಭಾಗ ಇವರಿಗೆ ದಿ. 20.01.2022 ರಂದು ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿಗಳು, ವಿಜಯಪುರ ಇವರು ವಿನಂತಿಸಿ ಪತ್ರ ಸಲ್ಲಿಸಿರುತ್ತಾರೆ.
- ಉಪಕರಣ ಕಾರ್ಯಗಾರವನ್ನು ಅಪರ ನಿರ್ದೇಶಕರ ಕಛೇರಿಯನ್ನಾಗಿ ಪರಿವರ್ತಿಸಲು ಅವಶ್ಯಕ ದುರಸ್ಥಿ ಕೆಲಸಗಳನ್ನು ರೂ.25.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಅನುದಾನ ಬಿಡುಗಡೆಯಾಗಿದ್ದು, ಈ ಕುರಿತು ಕಾಮಗಾರಿಗಾಗಿ ದಿ.02.02.2022 ರಂದು ಟೆಂಡರ್ ಕರೆಯಲಾಗಿದೆ.

**ಆಕುಕ 15 ಹೆಚ್‌ಎಸ್‌ಡಿ 2022**

(ಡಾ॥ ಕೆ ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು